

ಮದುವೆ ಎಂಬುದು ಗಂಡು ಹೆಣ್ಣು ಇಬ್ಬರೂ ಹೂವಿನಷ್ಟೇ ಸಹಜವಾಗಿ ಅರಳಿಕೊಳ್ಳಲು ಇರುವ ಭಾವಬಂಧ. 'ಮನೆ' ಎಂಬುದು ನಮ್ಮವರೊಂದಿಗೆ ಸುರಕ್ಷಿತ ಭಾವದಲ್ಲಿ ಬದುಕುವ ಒಂದು ತಾಣ. ಈ ಎರಡೂ ಸೇರಿದ ವ್ಯವಸ್ಥೆ ಕುಟುಂಬ. ಆದರೆ ಈ ವ್ಯಾಖ್ಯಾನ ನಮ್ಮ ಸಮಾಜದ ಬಹುತೇಕ ಮದುವೆ, ಮನೆ, ಕುಟುಂಬಗಳಿಗೆ ಅನ್ವಯಿಸುವುದೇ ಇಲ್ಲ. ಮದುವೆಯ ಮಧುಮಂಚದ ಮೇಲೆ ಹೂವಲ್ಲ, ಮುಳ್ಳುಗಳಿರುತ್ತವೆ. ಮನೆಯೆಂಬ ನೆಮ್ಮದಿಯ ತಂಗುದಾಣದಲ್ಲಿ ಅಶಾಂತಿಯ ಜೇಡ ಬಲೆ ನೇಯುತ್ತಿರುತ್ತದೆ. ಕುಟುಂಬವೆಂಬ ವ್ಯವಸ್ಥೆಯ ಒಳಗೆ ಹಿಂಸೆ ಪಂಜುಬಿಚ್ಚಿ ಎರಗುತ್ತಿರುತ್ತದೆ. ಈ ಎಲ್ಲ ಕಡೆಗಳಲ್ಲಿಯೂ ಬಹುಪಾಲು ಹಿಂಸೆಯ ಸವಾರಿ ನಡೆಯುವುದು ಹೆಣ್ಣಿನ ಮೇಲೆಯೇ. ಸುಶಿಕ್ಷಿತ ಅಶಿಕ್ಷಿತ ಎಂಬ ಭೇದವಿಲ್ಲದೆ ಹೆಣ್ಣು ತನ್ನವರು ಎಂದುಕೊಂಡವರಿಂದಲೇ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾಳೆ. ಪುರುಷನ ನೂರು ತೆವಲುಗಳಿಗೆ ಅವಳು ಬಲಿಪೀಠವಾಗುತ್ತಿದ್ದಾಳೆ. ಐಷಾರಾಮಿ ಅಪಾರ್ಟ್‌ಮೆಂಟ್ ಇರಲಿ, ಕೊಳೆಗೇರಿಯ ಜೋಪಡಿಯಿರಲಿ, ದೌರ್ಜನ್ಯದ ಕತ್ತಿತುದಿ ಹೆಣ್ಣಿನ ನೆತ್ತಿಯನ್ನು ಚುಚ್ಚುತ್ತಲೇ ಇರುತ್ತದೆ. 'ಹೆಣ್ಣು ಸಬಲೆಯಾಗಿದ್ದಾಳೆ', 'ಅವಳು ಸುಶಿಕ್ಷಿತಳಾಗಿದ್ದಾಳೆ', 'ಮೀಸಲಾತಿಯ ಬಲವೇನು ಕಮ್ಮಿಯೇ?' ಎಂದೆಲ್ಲ ನಾಲಿಗೆ ಸದರ ಬಿಡುವವರು ಓದಲೇಬೇಕಾದ ವಿಶ್ಲೇಷಣೆ ಇಲ್ಲಿದೆ. ಇದು ಪುರುಷರಷ್ಟೇ ಅಲ್ಲ, ಶತಮಾನಗಳ ಕುಣಿಕೆಗೆ ತಮ್ಮ ಕತ್ತನ್ನು ತಾವೇ ಒಡ್ಡಿಕೊಳ್ಳುತ್ತಿರುವ ಮಹಿಳೆಯರೂ ಓದಲೇಬೇಕಾದ ಲೇಖನ.

**ಸೌಮ್ಯಲಕ್ಷ್ಮೀ ಕುಕ್ಕಜೆ, ನ್ಯಾಯವಾದಿ**